ಅಧ್ಯಕ್ಷರು : ಆ ವಿಷಯವನ್ನು ನಿಯಮ 69ರ ಮೇರೆಗೆ ಚರ್ಚಿಸಲು ಅವಕಾಶ ಮಾಡಿ ಕೊಡುತ್ತಿದ್ದೇನೆ. ಈಗ ಎರಡು ವಿಧೇಯಕಗಳು ಇವೆ. ಅವುಗಳ ಮೇಲೆ ಚರ್ಚೆಯಾದ ನಂತರ ನಿಯಮ 69ರ ಅಡಿಯ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಆಯಿತು, ಹಾಗೇ ಮಾಡಿ.

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ನಿರ್ದಿಷ್ಟ ಕಾನೂನುಗಳನ್ನು ನಿರಸನಗೊಳಿಸುವುದು ಮತ್ತು ತಿದ್ದುಪಡಿ ಮಾಡುವ ವಿಧೇಯಕ, 2000

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2000ನೇ ಸಾಲಿನ ನಿರ್ದಿಷ್ಟ ಕಾನೂನುಗಳನ್ನು ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಸ್ವಾತಂತ್ರ್ಯ ಬಂದ ಮೇಲೆ ಅನೇಕ ಶಾಸನಗಳಿಗೆ ತಿದ್ದುಪಡಿಗಳಾಗಿವೆ. ಈ ತಿದ್ದುಪಡಿಗಳಾದರೂ ಕೂಡ ಶಾಸನದ ಪುಸ್ತಕದಲ್ಲೇ ಉಳಿದಿವೆ. ಅವು ಸುಮಾರು ಸಾವಿರಕ್ಕಿಂತ ಹೆಚ್ಚು ಇವೆ. ತಿದ್ದುಪಡಿಗಳಾಗಿ ಶಾಸನಗಳಾದರೂ ಕೂಡ ತಿದ್ದುಪಡಿಗಳು ಪುಸ್ತಕದಲ್ಲೇ ಉಳಿದಿವೆ. ಅವುಗಳನ್ನು ನಿರಸನಗೊಳಿಸಬೇಕು, ಅವುಗಳು ಸ್ಟ್ಯಾಚ್ಯೂಟ್ ಬುಕ್‌ನಲ್ಲಿ ಇರಬೇಕಾದ ಅಗತ್ಯವಿಲ್ಲ ಎಂಬ ಉದ್ದೇಶದಿಂದ ಇದನ್ನು ತಂದಿದ್ದೇವೆ. ಇದು ಕೇಂದ್ರ ಸರ್ಕಾರದ ನಿರ್ಧಾರ ಕೂಡ ಆಗಿದೆ. ಕೇಂದ್ರ ಸರ್ಕಾರದ ಜೈನ್ ಕಮೀಷನ್ ಆಯೋಗ ಶಿಫಾರಸ್ಸಿನಂತೆ ಯಾವ ಯಾವ ಶಾಸನಗಳು ಸ್ವಾತಂತ್ರ್ಯ ಪೂರ್ವಕ್ಕೆ ಇದ್ದವೋ, ಸ್ವಾತಂತ್ರ್ಯ ನಂತರ ಇದ್ದವೋ ಅವುಗಳಿಗೆ ತಿದ್ದುಪಡಿಗಳಾಗಿದೆ, ಅವುಗಳು ಏಕೆ ಪುಸ್ತಕದಲ್ಲಿ ಇರಬೇಕು ಅವುಗಳನ್ನು ತೆಗೆದು ಬಿಡಬೇಕು ಎಂಬ ದೃಷ್ಟಿಯಿಂದ ಇದನ್ನು ತರಲಾಗಿದೆ.

+ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಸಚಿವರು ನಿರಸನಗೊಳಿಸಲಿಕ್ಕಾಗಿ ಎರಡು ವಿಧೇಯಕಗಳನ್ನು ತಂದಿದ್ದೀರಿ. ಒಂದು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟಿದ್ದು. ನಮ್ಮ ಸರ್ಕಾರ ಇದ್ದಾಗ ಒಂದು ಸಮಿತಿ ಮಾಡಿದ್ದೆವು. ಆ ಸಮಿತಿ ಕೆಲವು ಶಿಫಾರಸ್ಸುಗಳನ್ನು ಮಾಡಿತ್ತು. ಅದು ಸಚಿವ ಸಂಪುಟದಲ್ಲಿ ಒಪ್ಪಿಗೆ ಸಹಾ ಆಗಿತ್ತು. ಇನ್ನೊಂದು ವಿಧೇಯಕ ನೀವು ತಂದಿದ್ದೀರಿ. ಅದು ಕೇಂದ್ರ ಸರ್ಕಾರ ರಚನೆ ಮಾಡಿದ್ದ ಜೈನ್ ಆಯೋಗದ ಶಿಫಾರಸ್ಸಿನ ಮೇಲೆ ಮಾಡಿರುವಂಥಾದ್ದು. ತಾವು ಯಾವುದನ್ನು ಈಗ ರೆಫರ್ ಮಾಡುತ್ತಿದ್ದೀರಿ ಎಂಬುದನ್ನು ದಯವಿಟ್ಟು ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಪಿ.ಸಿ. ಜೈನ್ ಅವರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ರಚಿಸಲಾಗಿತ್ತು. ಸುಮಾರು 1,017 ಇಂತಹ ಅಧಿನಿಯಮಗಳು ಇವೆ. ಅವುಗಳು ಶಾಸನ ಪುಸ್ತಕದಲ್ಲಿ ಈಗಲೂ ಇವೆ. ಅವುಗಳನ್ನು ನಿರಸನಗೊಳಿಸದೇ ಅವುಗಳನ್ನು ನಾವು ಹೊರ ತೆಗೆಯುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ಅದನ್ನು ನಿರಸನಗೊಳಿಸುವುದಕ್ಕಾಗಿ ಜೈನ್ ಆಯೋಗದ ಶಿಫಾರಸ್ಸಿನಂತೆ ಇದನ್ನು ತಂದಿದ್ದೇವೆ. ಈ ವಿಧೇಯಕದಲ್ಲಿ 'ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ' ಶೀರ್ಷಿಕೆಯಲ್ಲಿ ಇದರ ಬಗ್ಗೆ ವಿವರವಾಗಿ ತಿಳಿಸಲಾಗಿದೆ. ತಮ್ಮ ಗಮನಕ್ಕೆ ತರುವ ಸಲುವಾಗಿ ನಾನು ಈಗ ಅದನ್ನು ಓದಿಬಿಡುತ್ತೇನೆ. "ಭಾರತ ಸರ್ಕಾರವು, ಕೇಂದ್ರ ಕಾನೂನುಗಳ ಪುನರಾವಲೋಕನೆಗಾಗಿ ಶ್ರೀ ಪಿ.ಸಿ. ಜೈನ್ ಅವರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ರಚಿಸಿದೆ. ಆಯೋಗದ ಶಿಫಾರಸ್ಸುಗಳ ಆಧಾರದ ಮೇಲೆ ಕೇಂದ್ರ ಸರ್ಕಾರವು, ಯಾವ ಅಧಿನಿಯಮಗಳ ವಿಷಯಗಳು, ಭಾರತದ ಸಂವಿಧಾನದ ಏಳನೇ ಅನುಸೂಚಿಯ 11ನೇ ಪಟ್ಟಿಯ ಅಡಿಯಲ್ಲಿ ಬರುತ್ತವೆಯೋ ಆ 118 ಅಧಿನಿಯಮಗಳ ಪಟ್ಟಿಯೊಂದನ್ನು, ಈ ಅಧಿನಿಯಮಗಳನ್ನು ನಿರಸನಗೊಳಿಸುವುದಕ್ಕಾಗಿ ಅಥವಾ ಉಳಿಸಿಕೊಳ್ಳುವುದಕ್ಕಾಗಿ ಪರಿಗಣಿಸುವ ಸಲುವಾಗಿ ಕಳುಹಿಸಲಾಗಿದೆ. ಈ 118 ಅಧಿನಿಯಮಗಳ ಪೈಕಿ, 11 ಅಧಿನಿಯಮಗಳನ್ನು ಕರ್ನಾಟಕದ ವಿವಿಧ ಅಧಿನಿಯಮಗಳ ಮೂಲಕ ಈಗಾಗಲೇ ನಿರಸನಗೊಳಿಸಲಾಗಿದೆ. ಪ್ರಸ್ತುತ 13 ಅಧಿನಿಯಮಗಳನ್ನು ರಾಜ್ಯದಲ್ಲಿ ಅವುಗಳನ್ನು ಜಾರಿಗೊಳಿಸುತ್ತಿಲ್ಲದ ಪ್ರಯುಕ್ತ ಕರ್ನಾಟಕ ರಾಜ್ಯಕ್ಕೆ ಅವುಗಳ ಅನ್ವಯಿಸುವಿಕೆಯನ್ನು ನಿರಸನಗೊಳಿಸುವುದಕ್ಕಾಗಿ ಪ್ರಸ್ತಾವಿಸಲಾಗಿದೆ." ಇದರಲ್ಲಿ ಯಾವ ಹಣಕಾಸಿನ ಇಂಪ್ಲಿಕೇಷನ್ಸ್ ಆಗಲೀ ಅಥವಾ ಕಾಂಪ್ಲಿಕೇಷನ್ಸ್ ಆಗಲೀ ಇಲ್ಲ. ಆದ್ದರಿಂದ ಈ ವಿಧೇಯಕಕ್ಕೆ ಒಪ್ಪಿಗೆ ನೀಡಬೇಕೆಂದು ಕೋರುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಈ ವಿಧೇಯಕವನ್ನು ನಾವು ಬೆಂಬಲಿಸುತ್ತೇವೆ. ಇದು ಸರ್ವಾನುಮತದಿಂದ ಅಂಗೀಕರಿಸತಕ್ಕ ವಿಧೇಯಕವಾಗಿದೆ. ಅದರಲ್ಲಿ ಯಾರದೂ ಏನೂ ತಕರಾರು ಇಲ್ಲ. ನನಗೆ ತಿಳುವಳಿಕೆ ಇರುವ ಹಾಗೆ ಪಿ.ಸಿ. ಜೈನ್‌ರವರು ಶಿಫಾರಸ್ಸು ಮಾಡಿರತಕ್ಕಂಥ ಇನ್ನೂ ಅನೇಕ ವಿಚಾರಗಳನ್ನು ನಿರಸನಗೊಳಿಸತಕ್ಕದ್ದು ಇದೆ. ಅದನ್ನು ಸರ್ಕಾರ ಆದಷ್ಟು ಬೇಗ ತೆಗೆದುಕೊಂಡು ಬಂದು ನಿರಸನಗೊಳಿಸಿದರೆ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಮತ್ತು ನಮ್ಮ ಸಿಸ್ಟಮ್ ಇಂಪ್ರೂವ್‌ಮೆಂಟ್ ಕೂಡ ಆಗುತ್ತದೆ. ಅದನ್ನು ಬೇಗ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಜೈನ್ ಆಯೋಗದ ಶಿಫಾರಸ್ಸಿನ ಹಿನ್ನೆಲೆಯಲ್ಲಿ ಉಳಿದಿರತಕ್ಕಂಥ ನಿರಸನಗಳನ್ನು ಸಹಿತ ತೆಗೆದುಕೊಂಡು ಬರಲಿಕ್ಕೆ ಬೇಕಾದಂತಹ ಪ್ರಸ್ತಾವನೆಗಳನ್ನು ಈ ಸದನದ ಮುಂದೆ ತರಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಗಮನಿಸಬೇಕಾದ ಮತ್ತೊಂದು ಅಂಶ ಸಹಾ ಇದೆ. ಹಿಂದೆ ಹಳೆಯ ಮೈಸೂರು ಸಂಸ್ಥಾನ ಎಂದು ಇತ್ತು. ಆಗ ಕೆಲವು ಶಾಸನಗಳಿದ್ದವು. ವಿಶಾಲ ಕರ್ನಾಟಕ ರಾಜ್ಯ ಸ್ಥಾಪನೆಯಾದ ಮೇಲೆ applications of the Legislation ಈ ರಾಜ್ಯಕ್ಕೆ ಅಷ್ಟೇ ಸೀಮಿತವಾಗಿರುವುದಕ್ಕೆ ಸಾಧ್ಯವಾಗುವುದಿಲ್ಲ, ವಿಶಾಲ ಕರ್ನಾಟಕಕ್ಕೆ ಅದರ ವ್ಯಾಪ್ತಿಯನ್ನು ವಿಸ್ತರಿಸಬೇಕು ಎಂಬ ಅಂಶ ಸಹಾ ಇದರಲ್ಲಿ ಸೇರಿದೆ. ಇನ್ನೂ ಕೆಲವು ಇಂತಹ ಅಧಿನಿಯಮಗಳ

ನಿರಸನಗೊಳಿಸುವಿಕೆ ಸಂಬಂಧಿಸಿದಂತೆ ಇಲಾಖೆಯಲ್ಲಿ ಪರಿಶೀಲನೆಯನ್ನು ಮಾಡುತ್ತಿದ್ದೇವೆ. ಅಗತ್ಯ ಇರುವುದನ್ನು ಮಾನ್ಯ ಸದಸ್ಯರು ಹೇಳಿದ ಹಾಗೆ ಪರಿಶೀಲಿಸಿ ನಿರಸನಗೊಳಿಸುವುದಕ್ಕಾಗಿ ಸಭೆಯ ಮುಂದೆ ತರುತ್ತೇನೆ ಎಂದು ಭರವಸೆ ಕೊಡುತ್ತೇನೆ.

ಅಧ್ಯಕ್ಷರು : ಈಗ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ, "2000ನೇ ಸಾಲಿನ ನಿರ್ದಿಷ್ಟ ಕಾನೂನುಗಳನ್ನು ನಿರಶನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4ರವರೆಗೆ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ವಿಧೇಯಕ್ಕೆ ಸೇರಿಸಲಾಯಿತು

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 2000ನೇ ಸಾಲಿನ ನಿರ್ದಿಷ್ಟ ಕಾನೂನುಗಳನ್ನು ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2000ನೇ ಸಾಲಿನ ನಿರ್ದಿಷ್ಟ ಕಾನೂನುಗಳನ್ನು ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕ 2000

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : "2000ದ ಕರ್ನಾಟಕ ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ"

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಮಂತ್ರಿಗಳು ಇದನ್ನು ವಿವರಣೆ ಮಾಡಲಿ. ಇದು ಜೈನ್ ಕಮಿಷನ್ ರೆಕಮಂಡೇಷನ್ ಅಲ್ಲ. ನನಗೆ ಗೊತ್ತಿರುವ ಹಾಗೆ ರಾಜ್ಯ ಸರ್ಕಾರದವರು 1956 ರಿಂದ 86, 90 ರವರೆಗೆ ಏನೇನು ನಿಯಮಾವಳಿ ಇತ್ತು ಅದರಲ್ಲಿ ಕೆಲವು ಮಾರ್ಪಾಡು ಮಾಡುವುದಕ್ಕೆ ನಾವು ಇದನ್ನು ನಿರಸನಗೊಳಿಸಬೇಕೆಂದು ಏಕ ಸದಸ್ಯ ಆಯೋಗ ರೆಕಮಂಡ್ ಮಾಡಿದ್ದು. ಇದನ್ನು ನಾವು ಓದಬೇಕಾಗುತ್ತದೆ. ಇದರಲ್ಲಿ ಎಷ್ಟೊಂದು ತಿದ್ದುಪಡಿ ತಂದಿದ್ದಾರೆ ಎಂದರೆ, ಸಾವಿರ ತಿದ್ದುಪಡಿಗಳಿವೆ. ಇತ್ತೀಚೆಗೆ ಮಾಡಿರುವುದನ್ನು ನಿರಸನಗೊಳಿಸುವುದರಿಂದ ಇಂಪ್ಲಿಕೇಷನ್ ಪಬ್ಲಿಕ್ ಇಂಟರೆಸ್ಟ್‌ಗೆ ಏನಾದರೂ ತೊಂದರೆಯಾಗುತ್ತದೆ ಎಂದು ನಾವು ಗಮನಿಸಬೇಕಾಗುತ್ತದೆ. ಎರಡು ದಿನ ಸಮಯ ಕೊಡಿ ನಾವು ಓದಿಕೊಂಡು ಬರುತ್ತೇವೆ. ನಾವು ಅಭ್ಯಾಸ ಮಾಡದೆ ಇದನ್ನು ಪಾಸ್ ಮಾಡುವುದು ಅಷ್ಟೊಂದು ಅಧವೇಶನ ಇನ್ನು ನಡೆಯುತ್ತದೆ ಆ ಸಂದರ್ಭದಲ್ಲಿ ಇಂಪ್ಲಿಕೇಷನ್ ಏನೆಂದು ಕೊನೆಯಪಕ್ಷ ನಮ್ಮ ಅಭಿಪ್ರಾಯ ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇದನ್ನು ನಾನು ಹೊಸದಾಗಿ ತಂದಿಲ್ಲ. ನಿಮ್ಮ ಸರ್ಕಾರ ಇದ್ದಾಗ ತಂದಿದ್ದರು. ಅದು ಹಾಗೆಯೇ ಉಳಿದಿತ್ತು. ಜಾರಿಗೆ ತರುವುದಕ್ಕೆ ನಿಮ್ಮ ಅನುಮತಿ ಕೇಳುತ್ತಿದ್ದೇವೆ. ಈ ವಿಧೇಯಕದಲ್ಲಿ ಕೆಲವು ವಿಧೇಯಕಗಳು ತಮ್ಮ ಪ್ರಯೋಜನವನ್ನು ಕಳೆದುಕೊಂಡಿವೆ. ಉಪಯೋಗ ಇಲ್ಲ. ಹಾಗೆಯೇ ಪುಸ್ತಕದಲ್ಲಿವೆ ಇನ್ನು ಕೆಲವು ತಿದ್ದುಪಡಿ ಅಧಿನಿಯಮ ತಂದಿದ್ದೇವೆ, ತಿದ್ದುಪಡಿ ಆಗಿದೆ ಅಧಿನಿಯಮ ಅಲ್ಲಿಯೇ ಉಳಿದಿದೆ. ಶಾಸನದ ಪುಸ್ತಕದಿಂದ ತೆಗೆದು ಹಾಕಲು ಮತ್ತು ನಿರಸನಗೊಳಿಸಲು ಈ ಮಸೂದೆ ತಂದಿದ್ದೇವೆ ಅಷ್ಟೆ. ಇದರಲ್ಲಿ ಹೊಸ ಬಿಲ್ ಇಲ್ಲ, ಹೇಳಬೇಕಾದ್ದು ಇಲ್ಲ. ಹಿಂದಿನ ಸರ್ಕಾರ ತೀರ್ಮಾನ ಮಾಡಿ ಈ ಸಭೆಯಲ್ಲಿ ಮಂಡಿಸುವುದಕ್ಕೆ ಪ್ರಯತ್ನ ಮಾಡಿತ್ತು, ಆದರೆ ಸಮಯ

ಮುಗಿದಿದ್ದರಿಂದ ಅದನ್ನು ಮಾಡುವುದಕ್ಕಾಗಲಿಲ್ಲ. ಇದು ರೋಟೀನ್ ಮ್ಯಾಟರ್. ಚರ್ಚೆ ಮಾಡುವುದಾದರೆ ಇಟ್ಟುಕೊಳ್ಳಿ ನಮ್ಮದು ಏನೂ ಆಭ್ಯಂತರವಿಲ್ಲ. ತಾವು ಅಧಿಕಾರದಲ್ಲಿದ್ದಾಗ ನಾವು ಕ್ಯಾಬಿನೆಟ್‌ನಲ್ಲಿ ಒಪ್ಪಿದ್ದನ್ನು ನಾವು ಇಲ್ಲಿ ತಂದಿದ್ದೇವೆಂದು ಹೇಳಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾವು ಮಾಡಿದ್ದೆಲ್ಲಾ ಮಾಡಿಕೊಳ್ಳುವುದಾದರೆ ಬೇರೆ ವಿಚಾರ ಇದೆ.

ಶ್ರೀ ಬಿ. ಸೋಮಶೇಖರ್ : ನಮ್ಮ ಸರ್ಕಾರ ಏನು ತಯಾರು ಮಾಡಿದೆ ಅದನ್ನೇ ತಂದಿದ್ದರೆ ನಮ್ಮ ಆಭ್ಯಂತರವಿಲ್ಲ. ಏನಾದರೂ ಬದಲಾವಣೆ ಮಾಡಿದ್ದರೆ ನಾವು ನೋಡಬೇಕಾಗುತ್ತದೆ. ಅದೇ ತಂದಿದ್ದರೆ ನಮ್ಮದೇನೂ ಆಭ್ಯಂತರವಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಇದು ಬಿಲ್‌ಗೆ ಅಮೆಂಡ್‌ಮೆಂಟ್ ಅಲ್ಲ, ಯಾವುದೋ ಅಮೆಂಡ್-ಮೆಂಟ್ ತಂದಿದ್ದೀರಿ ಆದರೆ ಅದು ಒರಿಜಿನಲ್ ವಿಧೇಯಕಕ್ಕೆ ಸಂಬಂಧವಿಲ್ಲ. ಇನ್ನು ಕೆಲವು ಬಿಲ್ ಉಪಯುಕ್ತತೆ ಕಳೆದುಕೊಂಡಿವೆ. ಅದನ್ನು ಸುಮ್ಮನೆ ಪುಸ್ತಕದಲ್ಲಿ ಇಟ್ಟುಕೊಂಡಿದ್ದೇವೆ. ಅದು ಜನರಿಗೆ ಕನ್‌ಫ್ಯೂಷನ್ ಆಗಬಾರದು ಎಂದು ಇದನ್ನು ಮಾಡುತ್ತಿದ್ದೇವೆ ಹೊರತು ಹೊಸ ಶಾಸನವೂ ಅಲ್ಲ, ಹಳೆಯ ಶಾಸನದ ತಿದ್ದುಪಡಿಯೂ ಅಲ್ಲ. ಯಾವುದು ಅನಗತ್ಯವೋ ಅದನ್ನು ತೆಗೆಯುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಮ್ಮ ಸರ್ಕಾರ ಇದ್ದಾಗ ನಾನೂ ಕೂಡ ಸಚಿವ ಸಂಪುಟದ ಸದಸ್ಯನಾಗಿದ್ದೆ. ಈ ಬಿಲ್ಲಲ್ಲಿ ಯಾವ ಇಂಪ್ಲಿಕೇಷನ್ ಆಗಿದ್ದರೂ ಸಹಿತ ಅದು ಯಾವ ರೂಪದಲ್ಲಿ ಇದೆ ಎಂದು ತಿಳಿದುಕೊಳ್ಳುವುದು ಬೇಡವಾ? ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ, ಇದರಲ್ಲಿ ಇರತಕ್ಕಂಥದ್ದು ಏನೆಂದು ಅವರಿಗೇ ಗೊತ್ತಿರುವುದಿಲ್ಲ. ನಾನು ಎತ್ತದೆ ಇದ್ದಿದ್ದರೆ ಹೌದು ಎಂದು ಹೇಳಿಕೊಂಡು ಹೋಗಬಹುದಾಗಿತ್ತು.

ಶ್ರೀ ಡಿ.ಬಿ. ಚಂದ್ರೇಗೌಡ : ಕರ್ನಾಟಕದ ಅಧಿನಿಯಮಗಳನ್ನು ಅವು ಈಗ ಜಾರಿಯಲ್ಲಿ ಇರಲಿ ಅಥವಾ ಇಲ್ಲದೇ ಇರಲಿ ತಿದ್ದುಪಡಿ ಮಾಡುವ ಅಧಿನಿಯಮಗಳು ಇದು ಒಂದು, ಎರಡನೆಯದಾಗಿ ಜಾರಿಯಲ್ಲಿ ಇಲ್ಲದೆ ಜಾರಿಗೆ ತಂದ ಪ್ರಾದೇಶಿಕ ಅಧಿನಿಯಮಗಳನ್ನು ತಿದ್ದುಪಡಿ ಮಾಡಿರುವ ಅಧಿನಿಯಮಗಳು. ಧನ ವಿನಿಯೋಗ ಅಧಿನಿಯಮಗಳು ನಿಯೋಜನ ಅವಧಿ ಮುಗಿದ ಅಧಿನಿಯಮಗಳಾಗಿರುವುದರಿಂದ ಅದಕ್ಕೆ ಅವಶ್ಯಕತೆ ಇಲ್ಲ. ಇದನ್ನು ನಿರಸನಗೊಳಿಸುವುದು ಅವಶ್ಯಕ. ಇಂಗಿತ ವಿಷಯಗಳನ್ನು ತೆಗೆದು ಹಾಕಿದ ಅಧಿನಿಯಮಗಳು ಇದರಲ್ಲಿ ತರುವುದು, ಕೇಂದ್ರದ ಅಧಿನಿಯಮಗಳು ಮತ್ತು ನಿರಸನಗೊಳಿಸಲಾಗಿದೆ ಎಂದು ಇಂಗಿತವಾಗಿರುವ ಅಧಿನಿಯಮಗಳು, ತಾತ್ಕಾಲಿಕವಾಗಿ ಮತ್ತು ಪ್ರಯೋಜನದಾಯದ ಅವಧಿ ಪೂರೈಸಿದ ಅಧಿನಿಯಮಗಳು ಇದ್ದು ಹಿಂದೆ ತಾವೂ ಇಲ್ಲಿ ತಂದಿರಿ, ಆದರೆ ಇದು ಮಂಜೂರು ಆಗುವುದಕ್ಕೆ ಮುಂಚೆ ಶಾಸನ ಸಭೆ ಡಿಸಾಲ್ವ್ ಆಯಿತು. ಅದು ಕೌನ್ಸಿಲ್‌ನಲ್ಲಿ ಇತ್ತು, ಪುನಃ ಅದನ್ನು ಇಲ್ಲಿ ತಂದು ಹೊಸ ಶಾಸನಸಭೆ ಬಂದಿರುವುದರಿಂದ ನಾವು ಹೇಳುತ್ತಿದ್ದೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೆ, ಶಾಸಕರಾದ ನಾವು ಇಲ್ಲಿ ಭಾಷಣ ಮಾಡುವಾಗ ಯಾವ ಮಸೂದೆಗಳು ಅವಧಿ ಮುಗಿದಿವೆ, ಯಾವುದನ್ನು ತೆಗೆದು ಹಾಕುತ್ತಿದ್ದೀರಿ, ಯಾವುದು ತಿದ್ದುಪಡಿಯಾಗಿ ಅಮಲಿನಲ್ಲಿ ಬಂದಿಲ್ಲ, ಜಾರಿಯಲ್ಲಿ ಕೊಡುತ್ತಿದ್ದೀರಿ ಎಂದು ಶಾಸಕರ ಗಮನಕ್ಕೆ ಬರುವುದಕ್ಕೆ ಒಂದು ಯಾದಿ ಆದರೂ ಕೊಡಿ. ಇಂತಿಂಥ ಕಾನೂನು ಮುಗಿದು ಹೋಗಿದೆ, ಇಂತಿಂತಹ ಅಮೆಂಡ್‌ಮೆಂಟ್ ಆಗಿದೆ ಎನ್ನುವುದನ್ನು ಶಾಸಕರ ಗಮನಕ್ಕೆ ತಂದರೆ ಈ ಶಾಸನಸಭೆಯಲ್ಲಿ ಏನು ಮಾಡುತ್ತಿದ್ದೆವೆಂದು ನಮಗೆ ತಿಳುವಳಿಕೆ ನೀಡುವ ಉದ್ದೇಶದಿಂದ ಕೊಟ್ಟರೆ ಒಳ್ಳೆಯದು. ಈಗ ಇದನ್ನು ಪಾಸ್ ಮಾಡುವುದಕ್ಕೆ ಅಡ್ಡಿ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸಾವಿರ ತಿದ್ದುಪಡಿಗಳನ್ನು ನಿರಸನಗೊಳಿಸತಕ್ಕಂಥದ್ದು 1999ರಲ್ಲಿ ನಾವು ಒಂದು ಕಾನೂನು ತಿದ್ದುಪಡಿ ತೆಗೆದುಕೊಂಡು ಬರುತ್ತೇವೆ, ಅದರಲ್ಲಿ ಎರಡು ವರ್ಷದ ಬದಲಾಗಿ ಮೂರು ವರ್ಷ ಎಂಬ ಪದಗಳನ್ನು ಯಾವಾಗಲೂ ಪ್ರತಿಯೋಚಿಸಲಾಗಿದೆ ಎಂದು ಭಾವಿಸತಕ್ಕದ್ದು. ಎಂದರೆ ಎರಡರ ಬದಲಿಗೆ ಮೂರು ವರ್ಷ ಎಂದು ಮಾಡುವುದು. ಅದರ ಫೈನಾನ್ಷಿಯಲ್ ಇಂಪ್ಲಿಕೇಷನ್ಸ್ ಏನೆಂದು ನಮಗೆ ಗೊತ್ತಿಲ್ಲ to be very frank. ಇದು ಏನಾಗುತ್ತದೆ ಎಂದು ನೋಡಿದರೆ ಭೈರೇಗೌಡರು ಕೃಷಿ ಇಲಾಖೆ ಬಗ್ಗೆ ಮಾತನಾಡಿದಾಗ 714 ಐಟಂಗಳನ್ನು ತರಿಸಿಕೊಳ್ಳುವುದಕ್ಕೆ ಇದ್ದಂತಹ ಕ್ವಾಂಟಂ ರಿಸ್ಟ್ರಿಕ್ಷನ್ಸ್ ತೆಗೆದು ಹಾಕಿದ್ದೀರಿ. ಬ್ಯೂರೋಕ್ರಾಟ್ ತೆಗೆದುಕೊಂಡು ಬಂದರು. ಮಂತ್ರಿಗಳು ಸಹಿ ಹಾಕಿದರು. ಪಾರ್ಲಿಮೆಂಟಿನಲ್ಲಿ ಪಾಸ್ ಆಯಿತು. ನಾನು ಮೊನ್ನೆ ದೆಹಲಿಗೆ ಹೋದಾಗ ತಜ್ಞರ ಜೊತೆ ಮಾತನಾಡಿದಾಗ ನಾವು ತಪ್ಪು ಮಾಡಿದ್ದೇವೆ ಅದನ್ನು ಸರಿಯಾಗಿ ಗಮನಿಸಬೇಕಾಗಿತ್ತು ಎಂದು ಹೇಳಿದರು. ಅದು ಹಾಗೆ ಆಗುವುದು ಬೇಡವೆಂದು ನಾವು ಹೇಳಿದ್ದು. ಎರಡು ದಿನ ತಡೆ ಹಿಡಿಯಿರಿ ಏನೆಂದು ನೋಡೋಣ. ಆದಾದಮೇಲೆ ಮಾಡೋಣ. ಈಗ ಕೊರಗರ ವಿಧೇಯಕವನ್ನು ನಾವು ಸ್ವಾಗತ ಮಾಡುತ್ತೇವೆ. ಅದನ್ನು ಇವತ್ತೇ ಬೇಕಾದರೆ ಪಾಸ್ ಮಾಡಿ ನಾವು ಬೇಡ ಎನ್ನುವುದಿಲ್ಲ. ರಾಜ್ಯದ ಹಿತದೃಷ್ಟಿಯಿಂದ ನಾವು ತಿಳಿದುಕೊಳ್ಳುವುದರಲ್ಲಿ ತಪ್ಪೇನಿದೆ? ಕಾನೂನುಗಳನ್ನು ಮಾಡತಕ್ಕಂತಹ ವಿಚಾರದಲ್ಲಿ ಮಾತ್ರ ಚರ್ಚೆಗಳು ಆಗಲೇಬೇಕು.

MR. SPEAKER : We will take it up tomorrow ಈಗ ಸಮಾಜ ಕಲ್ಯಾಣ ಇಲಾಖಾ ಸಚಿವರು ವಿಧೇಯಕವನ್ನು ಸೂಚಿಸುವುದು.

ಕರ್ನಾಟಕ ಕೊರಗರ (ಆಜಲು ಪದ್ಧತಿ ನಿಷೇಧ) ವಿಧೇಯಕ, 2000

ಪರ್ಯಾಲೋಚನಾ ಪ್ರಸ್ತಾವ

+ ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, 2000,ದ ಕರ್ನಾಟಕ ಕೊರಗರ (ಆಜಲು ಪದ್ಧತಿ ನಿಷೇಧ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು